# ನೀರಿನ ಮಾರಾಟ



ನೀರಿನ ಖಾಸಗೀಕರಣವನ್ನು ಮಹಾರಾಜರು ಹಿಂದಕ್ಕೆ ತೆಗೆದುಕೊಂಡಿದ್ದು ಏಕೆ?

■ ಮಲ್ಲಿಕಾರ್ಜುನ ಹೊಸಪಾಳ್ಯ
ಕಲೆ: ಭಾವು ಪತ್ತಾರ್

ವೃಂದ: ರಾಜ, ರಾಜಾಧಿರಾಜ, ರಾಜ ಮಾರ್ತಾಂಡ, ದಂಡ ಪಿಂಡ ಶ್ರೀ ಶ್ರೀ ಶ್ರೀ ಗೆದ್ಲಳ್ಳಿ ಮಹಾರಾಜ್ ಬಹುಪರಾಕ್ ಬಹುಪರಾಕ್.

ರಾಜ: ಯಾರಲ್ಲಿ?

ಮಂತ್ರಿ: ಏನಪ್ಪಣೆ ಮಹಾಪ್ರಭು.

ರಾಜ: ಆಸ್ಥಾನ ನರ್ತಕಿಯನ್ನು ಸಭಾಮಧ್ಯಕ್ಕೆ ಬರಮಾಡು.

ಮಂತ್ರಿ: ಪ್ರಭುಗಳು ಮನ್ನಿಸಬೇಕು, ನರ್ತಕಿ ಬರುವ ಹಾಗಿಲ್ಲ.

ರಾಜ: ಏಕೆ ಬರುವ ಹಾಗಿಲ್ಲ?

ಮಂತ್ರಿ: ಮೆಟರ್ನಿಟಿ ಲೀವ್.

ರಾಜ: ಓಹೋ ಹೌದಲ್ಲವೇ, ಹಾಳು ಮರೆವು. ಇರಲಿ, ರಾಜ್ಯದಲ್ಲಿ ಎಲ್ಲರೂ ಕ್ಷೇಮವೇ? ಮಳೆ ಬೆಳೆ ಚೆನ್ನಾಗಿ ಆಗುತ್ತಿದೆಯೇ?

ಮಂತ್ರಿ: ತಮ್ಮ ಆಳ್ವಿಕೆಯಲ್ಲಿ ಯಾವುದಕ್ಕೂ ಕಮ್ಮಿ ಇಲ್ಲ ಪ್ರಭು. ಉತ್ತರ ಕರ್ನಾಟಕ ಮಲೆನಾಡಾಗಿದೆ, ಮಲೆನಾಡು ಬಳ್ಳಾರಿಯಾಗಿದೆ.

ರಾಜ: ಸಾಕು, ಅಂದಹಾಗೆ ನಮ್ಮ ಇಂದಿನ ಕಾರ್ಯಕ್ರಮ?

ಮಂತ್ರಿ: ತಮ್ಮನ್ನು ಕಾಣಲು ಬಹುರಾಷ್ಟ್ರೀಯ ಕಂಪನಿಯ ಪ್ರತಿನಿಧಿಯೊಬ್ಬರು ಅಮೆರಿಕಾದಿಂದ ಆಗಮಿಸಿದ್ದಾರೆ.

ರಾಜ: ಅಮೆರಿಕಾ? ನಮಗೆ ಚೆನ್ನಾಗಿ ಗೊತ್ತಿದೆ ಬಿಡಿ, ಅಲ್ಲಿನ ಅಧಕ್ಷ ಓಬಮ್ಮ ನಮ್ಮ ಚೆಡ್ಡಿ ದೋಸ್ತರು, ಬರ ಹೇಳಿ.

ಮಂತ್ರಿ: ಅದಕ್ಷ ಅಲ್ಲ ಪ್ರಭು ಅಧ್ಯಕ್ಷ.

ರಾಜ: ಎರಡೂ ಒಂದೇ ತಾನೆ ಮಂತ್ರಿ? ನಮಗೆ ಅಷ್ಟೂ ಗೊತ್ತಿಲ್ಲವೇ, ಸುಮ್ಮನೆ ಅಮೆರಿಕಾದವರನ್ನು ಬರಮಾಡಿ. (ಅಮೆರಿಕಾ ಪ್ರತಿನಿಧಿ ಬರುವರು)

ಅಮೆರಿಕ ಪ್ರತಿನಿಧಿ: ಗೆದ್ಲಳ್ಳಿ ಮಹಾರಾಜರಿಗೆ ನಮಶ್ಕಾರ ನಮಶ್ಕಾರ.

ರಾಜ: ಹಲ್ಲೊ ಹೌ ಡು ಡು, ಗುಡ್ ನೈಟ್ ಗುಡ್ ನೈಟ್,... ಹೇಳಿ, ಏನು ಸಮಾಚಾರ, ಓಬಮ್ಮ ಕ್ಲಿಂಟಣ್ಣ ಚೆನ್ನಾಗಿದ್ದಾರೆಯೇ?

(ಪ್ರತಿನಿಧಿ ಕಕ್ಕಾಬಿಕ್ಕಿಯಾಗಿ ನೋಡುವನು)

ಮಂತ್ರಿ: ನಿಮ್ಮ ಒಬಾಮಾ ಹಾಗೂ ಕ್ಲಿಂಟನ್ ಬಗ್ಗೆ ಕೇಳುತ್ತಿದ್ದಾರೆ.

ಪ್ರತಿನಿಧಿ: ಓಹೋಹೋಹೋ!

ರಾಜ: (ಪ್ರತಿನಿಧಿಯ ಉದ್ಗಾರವನ್ನು ತಡೆದು) ಹೇಳಿ ನಮ್ಮಿಂದೇನಾಗಬೇಕು?

ಮಂತ್ರಿ: ಇವರ ಕಂಪನಿಯು ಪರಿಶುದ್ಧವಾದ ಬಾಟಲಿ ನೀರನ್ನು ಸಪ್ಲೈ ಮಾಡುವುದರಲ್ಲಿ ಎತ್ತಿದ ಕೈ. ನಮ್ಮ ನದಿಗಳನ್ನು ಇವರಿಗೆ ಕೊಟ್ಟರೆ ನಮ್ಮ ಕೆಲಸ ಮುಗಿಯಿತು. ಅಲ್ಲದೆ ಆಳಕ್ಕೆ ಕೊಳವೆ ಬಾವಿ ತೋಡಿ ನಿಮಿಷಾರ್ಧದಲ್ಲಿ ನೀರು ತೆಗೆಯುವ ಕಲೆಯೂ ಇವರಿಗೆ ಕರತಲಾಮಲಕ. ನಮ್ಮ ಜನರ ಮನೆ ಒಳಕ್ಕೇ ನೀರು ಬರುತ್ತದೆ. ಅದಕ್ಕೆ ಪರ್ಮಿಷನ್ ಕೇಳಲು ಬಂದಿದ್ದಾರೆ.

ರಾಜ: ನಮ್ಮ ರಾಜ್ಯದ ಜನರು ಬಾವಿ, ಕಲ್ಯಾಣಿ, ತಲಪರಿಗೆ, ಕೆರೆಗಳ ನೀರು ಕುಡಿಯುತ್ತಾ, ವ್ಯವಸಾಯಕ್ಕೆ ಬಳಸುತ್ತಾ ಆರಾಮಾಗಿದ್ದಾರಲ್ಲಾ, ಇವರ ಬಾಟಲಿ ನೀರು ಯಾಕೆ ಬೇಕು, ಬೇಡ ಎಂದು ಹೇಳಿ.

ಪ್ರತಿನಿಧಿ: ಮಹಾರಾಜರೇ ನಮಗೆ ನೀವು ಈ ಕಾಂಟ್ರ್ಯಾಕ್ಟ್ ಕೊಟ್ಟರೆ ನಿಮಗೆ ನಾವು ದುಡ್ಡು ಕೊರುತ್ತೇವೆ.

ರಾಜ: ದುಡ್ಡೇ? ಯಾರಿಗೆ ಬೇಕು ನಿಮ್ಮ ದುಡ್ಡು, ನಮ್ಮ ಬಳಿ ತುಂಬಾ ಇದೆ ದುಡ್ಡು.

ಪ್ರತಿನಿಧಿ: ನಿಮ್ಮ ಬಲಿ ಇರುವುದು ರೂಪಾಯಿ, ನಾವು ನಿಮಗೆ ಡಾಲರ್ ಕೊರುತ್ತೇವೆ ಡಾಲರ್.

ರಾಜ: ಡ್ರಾಯರ್ರೇ, ನಮ್ಮ ಬಳಿ ಆರು ಜೊತೆ ಡ್ರಾಯರ್ ಇವೆ, ರಾಮರಾಜ್, ಜಾಕಿ ಕಂಪನಿಯವು, ನಿಮ್ಮ ಡ್ರಾಯರ್ ನಮಗೇಕೆ ಬೇಕು.

ಪ್ರತಿನಿಧಿ: ಓ ಮೈ ಗಾಡ್, ಡ್ರಾಯರ್ ಅಲ್ಲ ಪ್ರಭು, ಡಾಲರ್. ಅಂದರೆ ಅಮೆರಿಕಾದ ಕರೆನ್ಸಿ, ನಮ್ಮ ಒಂದು ಡಾಲರ್ರಿಗೆ ನಿಮ್ಮ ಎಪ್ಪತ್ತು ರೂಪಾಯ್